# ಭಾರತದಲ್ಲಿ ಸಾಂಸ್ಕೃತಿಕ ಪುನರುತ್ಥಾನ

ಪ್ರೊ . ಕೆ.ಬಿ.ಪ್ರಭುಪ್ರಸಾದ್

ಪ್ರಪಂಚದ ವಿವಿಧ ದೇಶಗಳಲ್ಲಿ ಹತ್ತಾರು ಆಶಯಗಳೊಂದಿಗೆ ಅನೇಕ ಬದಲಾವಣೆಗಳು ಉಂಟಾಗುತ್ತವೆ. ಭಾರತದಲ್ಲಿ ಸಾಂಸ್ಕೃತಿಕವಾಗಿ ಒಂದು ಪುನರುತ್ಥಾನ ಇಂದಿನ ಆವಶ್ಯಕತೆಯಾಗಿದೆ. ಈ ಕುರಿತು ಬರೆದಿರುವ ಲೇಖಕರು ನಿವೃತ್ತ ಪ್ರಾಧ್ಯಾಪಕರು. ಉತ್ತಮ ವಿದ್ವಾಂಸರೂ, ಲೇಖಕರೂ, ಗೀತರಚನಕಾರರೂ ಆಗಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

**ಸಂ**ಸ್ಕೃತಿ ಎಂಬುದು ನಿಂತ ನೀರಲ್ಲ. ನಿರಂತರವಾಗಿ ಹರಿಯುವ ವಾಹಿನಿ. ಮತ್ತೆ ಮತ್ತೆ ಹೊಸದಾಗುವುದು ಅದರ ಜೀವಂತಿಕೆಯ ಲಕ್ಷಣ. ಭಾರತೀಯ ಸಂಸ್ಕೃತಿ ಅತ್ಯಂತ ಪ್ರಾಚೀನವಾದುದು. ವೇದಕಾಲೀನವಾದುದು. ಅಂತೆಯೆ ನಿತ್ಯನೂತನವಾದುದು. ಹಾಗೆಯೆ ಸಂಸ್ಕಾರ ಎಂಬುದು ಜನ್ಮಜನ್ಮಾಂತರವಾಗಿ ಬರುತ್ತದೆ. ಹಿಂದಿನ ಜನ್ಮದ ನೆನಪಿರುವುದಿಲ್ಲವಾದರೂ, ಬಾಲ್ಯದ ಮುಗ್ಧತೆಯಲ್ಲೇ ಮಾನವನ ನಡೆ, ನುಡಿ, ಬುದ್ಧಿಶಕ್ತಿ, ಪ್ರತಿಭೆ ಗತಜನ್ಮದ ಸಾಧನೆಯನ್ನು ತೋರಿಸುವಂತೆ ಪ್ರಕಟವಾಗುವುದು ಜಗತ್ತಿನಲ್ಲಿ ಅನುಭವಕ್ಕೆ ಬಂದಿದೆ. ಹಿಂದಿನ ಜನ್ಮದಲ್ಲಿ ಬಹು ದೊಡ್ಡ ಕಲಾವಿದನಾಗಿರಬಹುದು, ಗಾಯಕನಾಗಿರಬಹುದು, ಸಂಗೀತವಾದನ ನಿಪುಣನಾಗಿರಬಹುದು, ಮಹಾವಿದ್ವಾಂಸನಾಗಿರಬಹುದು ಎಂದೆನಿಸುವಂತಹ ಪ್ರತಿಭೆ ಬಾಲ್ಯದಲ್ಲೇ ಕಾಣಿಸಿರುವುದಕ್ಕೆ ಅನೇಕ ನಿದರ್ಶನಗಳಿವೆ. ವ್ಯಕ್ತಿಜೀವನದಲ್ಲಿ ಕಾಣಿಸುವುದು ಸಮಷ್ಟಿಯಲ್ಲಿ ಕಾಣುತ್ತದೆ.

ವೇದಕಾಲದ ಸಂಸ್ಕೃತಿ ಕೆಲ ಕಾಲ ಮರೆಯಾಗಿದ್ದುದು ಸ್ವಾಮಿ ವಿವೇಕಾನಂದರ 'ಅನುಷ್ಠಾನ ವೇದಾಂತ' ರೂಪದಲ್ಲಿ ಪುನರುತ್ಥಾನವಾಯಿತು. ನಿರಂತರ ಬದಲಾವಣೆ ಪರಿವರ್ತನಶೀಲವಾದ ಈ ಜಗತ್ತಿನ ಲಕ್ಷಣ. ಏರಿಕೆ ಆಗಬಹುದು, ಇಳಿಕೆಯಾಗಬಹುದು. ಒಂದಷ್ಟು ಕಾಲ ಉತ್ಕರ್ಷವಾಗಿದ್ದು, ಸುವರ್ಣಯುಗ ಎನಿಸಿಕೊಂಡುದು ತನ್ನದೇ ಆಂತರಿಕ ದೌರ್ಬಲ್ಯದಿಂದ ಪತನವಾಗುವುದನ್ನು ಜಗತ್ತಿನ ಎಲ್ಲ ಮಹಾಮಹಾ ನಾಗರಿಕತೆಗಳಲ್ಲಿ ಕಾಣಬಹುದು. ಉದಾ: ಗ್ರೀಕ್ ನಾಗರಿಕತೆ, ಅದಕ್ಕೆ ಮುಂಚಿನ ಈಜಿಪ್ಷಿಯನ್, ಸುಮೇರಿಯನ್ ಇತ್ಯಾದಿ. ನಾಗರಿಕತೆ ಸಂಸ್ಕೃತಿಗಿಂತಲೂ ವಿಶಾಲಾರ್ಥವುಳ್ಳದ್ದು. ನಮ್ಮ ದೇಶದಲ್ಲೇ ಒಂದು ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಇಂಡಸ್ ವ್ಯಾಲಿ (ಸಿಂಧೂ ಕಣಿವೆ) ಸಿವಿಲೈಸೇಷನ್ ಅನೇಕ ಸಾಂಸ್ಕೃತಿಕ ಸಂಗತಿಗಳನ್ನು ಒಳಗೊಂಡಿತ್ತೆಂಬುದನ್ನು ಉತ್ಖನನ ತೋರಿಸಿದೆ. ಇವೆಲ್ಲ ಮರೆಯಾಗಿ ವೇದೋಪನಿಷತ್ತುಗಳ ಕಾಲದ ನಾಗರಿಕತೆ ಕಾಲಕಾಲಕ್ಕೆ ಆಗುವ ಬದಲಾವಣೆ ಗಳನ್ನು ಅರಗಿಸಿಕೊಂಡು ಈಗಲೂ ಜೀವಂತವಾಗಿರುವುದು, ನಿತ್ಯ ನೂತನ ಎನಿಸಿಕೊಂಡಿರುವುದು ಅದರ ಅಂತಸ್ಸತ್ವದಿಂದ.

ಆ ಸತ್ವ ಇರುವುದು ಅದರ ಅಡಿಗಲ್ಲಾದ 'ಸತ್ಯ' ಎಂಬ ಮೌಲ್ಯದಲ್ಲಿ. ವಸ್ತುಸ್ಥಿತಿ ಬದಲಾಗುವಂತಹದು. ಬದಲಾಗದಿರುವುದನ್ನು 'ಸತ್ಯ' ಎನ್ನುತೇವೆ. ಅದರ ಮೂಲವನ್ನು ನಮ್ಮ ಹಿರಿಯರು 'ಋತ' ಎಂದರು. ''ಸತ್ಯಮೇವ ಜಯತೇ ನಾನೃತಂ''; ಪ್ರಳಯವೇ ಆಗಲಿ, ಆಗಿ ಮರು ಸೃಷ್ಟಿಯಾಗಲಿ 'ಸತ್ಯ' ಬದಲಾಗುವುದಿಲ್ಲ. ಏಕೆಂದರೆ ಎಲ್ಲದರ — ರವಿ, ಚಂದ್ರ, ತಾರಾವಳಿ — ಬ್ರಹ್ಮಾಂಡದ, ವಿಶ್ವದ ಅಸ್ತಿತ್ವ ನಿಂತಿರುವುದು ಬದಲಾಗದ ಸತ್ಯದ ಮೇಲೆ. ಋತದ ಮೇಲೆ ಬ್ರಹ್ಮಾಂಡದ ಎಲ್ಲ ಸೌರವ್ಯೂಹಗಳೂ, ಗ್ರಹಗಳೂ ಸದಾ ಚಲಿಸುತ್ತಿದ್ದರೂ ಪರಸ್ಪರ ಡಿಕ್ಕಿ ಹೊಡೆಯದಂತೆ ನಿಯಂತ್ರಿಸುತ್ತಿರುವುದು ಋತವೇ.

ಸತ್ಯ ಎಂದರೇನೆ ಬದಲಾಗದಿರುವುದು ಎಂದರ್ಥ. ಸತ್ಯವೇ ಪರಮಶಕ್ತಿ. ಆದ್ದರಿಂದ ಸತ್ಯವೇ ದೇವರು. ಸಮಸ್ತ ಪ್ರಕೃತಿಯನ್ನು ಸೃಷ್ಟಿಸಿದ ಮತ್ತು ನಿಯಂತ್ರಿಸುವ ಪರಮ ಚೈತನ್ಯವನ್ನು **'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ'** ಎಂದರು ದಾರ್ಶನಿಕರು, ಅಂದರೆ ಅದನ್ನು ಅನುಭವ ಮುಖೇನ ಅರಿತವರು.

ಪ್ರಾಚೀನ ಗುರುಕುಲಗಳನ್ನು ನಡೆಸುತ್ತ ಲೌಕಿಕ ಜ್ಞಾನ-ಆತ್ಮಜ್ಞಾನ ಎರಡನ್ನು ಪಡೆಯುವ ಶಿಕ್ಷಣವನ್ನು ಕೊಟ್ಟ ಬಳಿಕ, ಬದುಕನ್ನು ಪ್ರವೇಶಿಸಲು, ಜೀವನದ ಸವಾಲುಗಳನ್ನು ಎದುರಿಸಿ ಕರ್ತವ್ಯಗಳನ್ನು ಪರಿಪಾಲಿಸಲು ಹೊರಡುವ ಶಿಷ್ಯರಿಂದ ಒಂದು ಪ್ರತಿಜ್ಞೆಯನ್ನು-ಪ್ರಮಾಣವನ್ನು ಮಾಡಿಸುತ್ತಿದ್ದರು: **'ಸತ್ಯಂ ವದ, ಧರ್ಮಂ ಚರ'**; ಸತ್ಯವನ್ನು ನುಡಿ, ಧರ್ಮದಂತೆ ನಡೆ ಎಂದು ಅರ್ಥ. ಸತ್ಯ ಮತ್ತು ಧರ್ಮ ಒಂದನ್ನೊಂದು ಬಿಟ್ಟಿರದ ಜೋಡಿ. ನುಡಿದಾಗ ಸತ್ಯ , ನುಡಿದಂತೆ ನಡೆದಾಗ ಧರ್ಮ.

ಪ್ರಾಪಂಚಿಕವಾದ ಸುಖವಾಗಲಿ, ದುಃಖವಾಗಲಿ, ಕಷ್ಟವಾಗಲಿ ಕ್ಷಣಿಕವಾದುದು. ಒಂದಾದ ಮೇಲೆ ಒಂದು ಬಂದು ಹೋಗುವಂತಹು. ಆತ್ಮ ಶಾಶ್ವತವಾದುದು. ಅಶಾಶ್ವತವಾದ ಲೌಕಿಕ ಬದುಕು ಸಾರ್ಥಕವಾಗುವುದು ಮೌಲ್ಯಗಳಿಂದ ಮಾತ್ರ. ಅವುಗಳನ್ನು ಜೀವನ ಮೌಲ್ಯಗಳು ಎನ್ನುತ್ತಾರೆ.

ಮನುಷ್ಯ ಸಂಘಜೀವಿ. ಕುಟುಂಬ ಅದರ ಘಟಕ. ಅನೇಕ ಕುಟುಂಬಗಳು ಸೇರಿ ಸಮಾಜ ಎನಿಸಿಕೊಳ್ಳುತ್ತದೆ. ವ್ಯಕ್ತಿಗತ ಮೌಲ್ಯಗಳು, ಕೌಟುಂಬಿಕ ಮೌಲ್ಯಗಳ ಅಡಿಪಾಯವಾದರೆ ಅವುಗಳ ಮೇಲೆ ರಚಿತವಾಗುವ ಸೌಧ ಸಮಾಜ. ಮೌಲ್ಯವಂತ

ವ್ಯಕ್ತಿಗಳು ಹೆಚ್ಚಾಗಿರುವ ಸಮಾಜ ಶ್ರೇಷ್ಠ ಸಮಾಜವೆನಿಸಿಕೊಳ್ಳುತ್ತದೆ. ವ್ಯಕ್ತಿ 'ನಾನು-ನನ್ನದು' ಎಂಬ ಅಹಮ್ಮನ್ನು ಬಿಟ್ಟು ಪರಹಿತವನ್ನು ಬಯಸಿ, ಅದಕ್ಕಾಗಿ ಶ್ರಮಿಸುವುದು ತನ್ನ ಕರ್ತವ್ಯ. ಸಮಾಜಕ್ಕೆ ಮಾಡಬೇಕಾದ ಸೇವೆ ಎಂದು ಭಾವಿಸಿ ಅದರಂತೆ ನಡೆದರೆ ಅವನ ಹೃದಯ ಸ್ವಾರ್ಥದ ಸಂಕುಚಿತ ಮನೋಭಾವವನ್ನು ತೊರೆದು 'ಬಹುಜನರ ಹಿತಕ್ಕಾಗಿ' ಎಂಬ ಭಾವನೆಯಿಂದ ವಿಶಾಲವಾಗುತ್ತದೆ.

ಮೂಲಭೂತ ಮೌಲ್ಯಗಳಾದ ಸತ್ಯ, ಧರ್ಮ, ಶಾಂತಿ, ಪ್ರೇಮ, ಅಹಿಂಸೆ ಎಂಬ ಈ ಪಂಚಕಗಳಿಂದ ಉಳಿದೆಲ್ಲ ಮೌಲ್ಯಗಳೂ ಹುಟ್ಟಿಕೊಂಡಿವೆ. ಸತ್ಯ-ಧರ್ಮಗಳಿಂದ ನಡೆ-ನುಡಿ ಶುದ್ಧವಾಗುತ್ತವೆ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವುದು ಪ್ರೇಮ ಅಥವಾ ನಿರ್ವ್ಯಾಜವಾದ ಪ್ರೀತಿ. ಪ್ರತಿಯಾಗಿ ಪ್ರೀತಿಯನ್ನು ನಿರೀಕ್ಷಿಸದ, ತಾಯಿ ಮಾತ್ರ ತೋರಬಲ್ಲ ಪ್ರೀತಿ. ಸತ್ಯವನ್ನೇ ನುಡಿದು ಧರ್ಮದಂತೆ ನಡೆದು ಪ್ರೇಮ ಎಂದರೆ ಸಹನೆ, ದಯೆ, ಕ್ಷಮೆ ಬೆಳೆಸಿಕೊಂಡಾಗ ಮನಸ್ಸು ಅವರ್ಣನೀಯವಾದ ಶಾಂತಿಯನ್ನು ಅನುಭವಿಸುತ್ತದೆ. ಅದು ವಿಶ್ವವನ್ನೇ ಪ್ರೀತಿಸುವ ಮೌಲ್ಯವಾದಾಗ ಅಹಿಂಸೆ ಎನಿಸಿಕೊಳ್ಳುತ್ತದೆ. ಯಾರನ್ನೂ ಹಿಂಸಿಸದ, ಕೊಲ್ಲದ, ನೋಯಿಸದ ಸ್ವಭಾವವಾಗಿ ಬೆಳೆದಾಗ, ಅದು ನೇತ್ಯಾತ್ಮಕ ಅಹಿಂಸೆಯಾದರೆ ಸೃಷ್ಟಿಯ ಸಕಲ ಚರಾಚರ ಜೀವಗಳನ್ನೂ ಪ್ರೀತಿಸುವುದು ಇತ್ಯಾತ್ಮಕ ಮೌಲ್ಯವಾದ ಅಹಿಂಸೆ ಎನಿಸಿಕೊಳ್ಳು ತ್ತದೆ.

ಇಷ್ಟೆಲ್ಲ ಮೌಲ್ಯಗಳಿಂದ ಕೂಡಿದ ಬದುಕೇ ಸಾಂಸ್ಕೃತಿಕ ಜೀವನವೆನಿಸಿಕೊಳ್ಳುತ್ತದೆ. ಸಾಂಸ್ಕೃತಿಕವಾಗಿ ಬದುಕುವುದೇ ಧರ್ಮ.

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥**
**ಪರಿತ್ರಾಣಾಯ ಸಾಧೂನಾಂ ವಿನಾಶಯಾ ಚ ದುಷ್ಕೃತಾಮ್ ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥**

'ಧರ್ಮ ಖಿಲವಾದಾಗ, ಅಧರ್ಮ ಹೆಚ್ಚಾದಾಗ ಸಾಧು-ಸಜ್ಜನರನ್ನು ರಕ್ಷಿಸಲು, ದುಷ್ಕೃತ್ಯಗಳನ್ನು ನಾಶಮಾಡಲು, ಮತ್ತೆ ಧರ್ಮವನ್ನು ನೆಲೆಗೊಳಿಸಲು ಪ್ರತಿಯುಗದಲ್ಲೂ ನಾನೇ ದೇಹ ಧರಿಸಿ ಇಳಿದು ಬರುತ್ತೇನೆ' ಎಂದು ಶ್ರೀಕೃಷ್ಣಪರಮಾತ್ಮ ಆಶ್ವಾಸನೆ ಕೊಟ್ಟಿರುವುದರಲ್ಲಿ ಒಂದು ಸತ್ಯ ಸಂಗತಿ ಅಡಗಿದೆ. ಯುಗಯುಗದಲ್ಲೂ ಧರ್ಮದ ಅವನತಿ, ಅಧರ್ಮದ ಪ್ರಾಬಲ್ಯ, ದುಷ್ಕೃತ್ಯಗಳ ಹಾವಳಿ ಉಂಟಾಗುವುದು ಸಹಜವಾದದು. ಆಗ ಸಾಧುಸಜ್ಜನರ ರಕ್ಷಣೆ, ದುಷ್ಕೃತ್ಯಗಳ ನಿವಾರಣೆ ಆಗಬೇಕೆಂದರೆ ಪರಮಶಕ್ತಿಯೇ ಬರಬೇಕಾಗುತ್ತದೆ. ನಿಶ್ಚಯವಾಗಿ ಬರುವುದೆಂಬ ಭರವಸೆ ಇದೆ. ಧರ್ಮದ ಸಂಸ್ಥಾಪನೆ ಎಂದರೆ ಸಾಂಸ್ಕೃತಿಕ ಪುನರುತ್ಥಾನ ಪ್ರತಿ ಯುಗದಲ್ಲಿಯೂ ಆಗುತ್ತಿರುತ್ತದೆ.



ಈ ಪುನರುತ್ಥಾನ ಭಾರತದಲ್ಲಿ ಈಗ ಆಗುವ ಅಗತ್ಯ ಎಂದಿಗಿಂತಲೂ ಹೆಚ್ಚಾಗಿದೆ. ಈಗ ಧರ್ಮ ಖಿಲವಾಗಿರುವುದು ಸ್ಪಷ್ಟವಾಗಿ ಎಲ್ಲರ (ಮೂಕಪ್ರೇಕ್ಷಕರಾಗಿ, ಪೀಡನೆಗೆ ಒಳಗಾಗಿರುವ, ಸಾಮಾನ್ಯ ಜನರ) ಅನುಭವಕ್ಕೆ ಬರುತ್ತಿದೆ. ಎಲ್ಲೋ ಕೆಲವರ ಹೊರತು ಬಹು ಜನರು ಅದರಲ್ಲು ನಾಯಕರೆನಿಸಿಕೊಂಡಿರುವವರು ಸ್ವಾರ್ಥಿಗಳಾಗಿದ್ದಾರೆ, ಲೋಭಿಗಳಾಗಿದ್ದಾರೆ. ತಮ್ಮ ಕರ್ತವ್ಯವನ್ನು ಮರೆತಿದ್ದಾರೆ. ಧನವೇ ಸರ್ವಸ್ವವೆಂದು ಹಣದ ಹಿಂದೆ ಓಡುತ್ತಿದ್ದಾರೆ. ಎಷ್ಟು ಹಣವನ್ನು ಗಳಿಸಿದರೂ ತೃಪ್ತಿಯಿಲ್ಲ. ಧನಲೋಭಿಗಳಾಗಿ ಲಕ್ಷ ಲಕ್ಷ ಅಲ್ಲ, ಕೋಟಿ ಕೋಟಿ ರೂಪಾಯಿಗಳನ್ನು ಏಳು ಏಳು ಪೀಳಿಗೆಗೂ ಹೆಚ್ಚಾಗುವಷ್ಟು, ಸಂಗ್ರಹಿಸಿ ಇಡುತ್ತಿದ್ದಾರೆ. ಧನವನ್ನು ಪಡೆಯಲು ಭ್ರಷ್ಟಾಚಾರ ಹೆಚ್ಚುತ್ತಿದೆ. ಸ್ವಲ್ಪವೂ ನಾಚಿಕೆ ಇಲ್ಲ. ಹಿಂಜರಿಕೆ ಇಲ್ಲ. ಕದ್ದು ಮುಚ್ಚಿ ಎನ್ನುವ ಕಾಲ ಬಹಳ ಹಿಂದಾಯಿತು. ರಾಜಾರೋಷವಾಗಿ, ನಿಗದಿಯಾದ ಪಟ್ಟಿಗಳನ್ನಿಟ್ಟು ವಸೂಲು ಮಾಡುತ್ತಾರೆ.

ಇದು ಧರ್ಮದ ಪರಮ ಅವನತಿ. ಸಾಂಸ್ಕೃತಿಕ ಪುನರುತ್ಥಾನಕ್ಕಾಗಿ ಭಾರತ ಕಾಯುತ್ತಿದೆ. 'ಭಾರತ ಜನನಿಯ ತನುಜಾತೆ'ಯಾದ ಕನ್ನಡನಾಡಿನಲ್ಲಿ ೧೨ನೇ ಶತಮಾನದ, ಭಕ್ತಿಭಂಡಾರಿ ಬಸವಣ್ಣನವರು ಮಾಡಿದುದು ಇದನ್ನೆ. ನಿತ್ಯ ನಡೆ ನುಡಿಗಳಲ್ಲಿ ವ್ಯಕ್ತವಾಗಬೇಕಾದ ಸಂಸ್ಕೃತಿ ಎಂದರೆ ಮೃದುವಾದ ಮಾತು-ಪ್ರೀತಿಯ ಮಾತು.

**''ಏನಿ ಬಂದಿರಿ ಹದುಳವಿದ್ದಿರೇ ಎಂದಡೆ**

**ನಿಮ್ಮ ಮೈ ಸಿರಿ ಹಾರಿ ಹೋಹುದೆ?**
**ಕುಳ್ಳಿರೆಂದರೆ ನೆಲ ಕುಳಿ ಹೋಹುದೆ?''**

— ಎನ್ನುತ್ತಾರೆ ಬಸವಣ್ಣನವರು. ಸಂಸ್ಕೃತಿ ಎಂದರೆ ಇಷ್ಟಾದರೂ ಶಿಷ್ಟಾಚಾರ ಇರಬಾರದೆ?


ಇಲ್ಲಿ ಎಂದರೆ ಪ್ರಸ್ತುತ ಜನ್ಮತಾಳಿರುವ ಇಹದಲ್ಲಿ ಸಲ್ಲುವ ಹಾಗೆ ನಮ್ಮ ಬದುಕು ಇರಬೇಕಲ್ಲವೆ? ನಿಜವಾಗಿ ಇಲ್ಲಿ ಸಲ್ಲುವವರು ಅಲ್ಲಿಯೂ (ಪರದಲ್ಲಿ) ಸಲ್ಲುವರು.

ಅಣ್ಣನವರ ಕಾಲದಲ್ಲಿ ಜಡ್ಡುಗಟ್ಟಿದ್ದ ಗೊಡ್ಡು ಸಂಪ್ರದಾಯದಲ್ಲಿ ಭಾರತದ ಸಂಸ್ಕೃತಿ ಮುಳುಗಿಹೋಗಿತ್ತು. ತಾವು ಶ್ರೇಷ್ಠರು ಎಂಬ ಕುಲದ ಹಮ್ಮು ಹೆಚ್ಚಾಗಿ ವರ್ಗ, ವರ್ಣ, ಲಿಂಗ ಭೇದಗಳಿರದ ಸಮಾನತೆ, ದಯೆ, ಸಹನೆ ಪೂರ್ತಿ ಮರೆಯಾಗಿದ್ದವು.

ಅಣ್ಣನವರು:

**''ಕೊಲುವನೆ ಮಾದಿಗ ಹೊಲಸು ತಿಂಬುವನೇ ಹೊಲೆಯ**
**ಕುಲವೇನೋ ಅವಂದಿರ ಕುಲವೇನೊ**
**ಸಕಲ ಜೀವಾತ್ಮರಿಗೆ ಲೇಸನೆ ಬಯಸುವ**
**ನಮ್ಮ ಕೂಡಲ ಸಂಗನ ಶರಣರೆ ಕುಲಜರು''**

ಶರಣರು ಎಂದರೆ ಭಗವಂತನಲ್ಲಿ ಸಂಪೂರ್ಣ ಶರಣಾದವರು. ಅಂಥವರು ಸಕಲ ಜೀವಾತ್ಮರಿಗೆ (ಕೇವಲ ಸಹ ಮಾನವರಿಗೇ ಅಲ್ಲ ಚರಾಚರ ಜೀವಿಗಳಿಗೆ ಲೇಸನೆ ಅಂದರೆ ಹಿತವನ್ನು ಬಯಸುವ ನಮ್ಮ ಕೂಡಲ ಸಂಗನ (ಪರಮಶಿವನ) ಶರಣರು ಶ್ರೇಷ್ಠರು. ಹಾಗೆ ಬಯಸದವರು ಶರಣರೇ ಅಲ್ಲ. ಎಲ್ಲರಿಗೂ ಎಲ್ಲ ಜೀವಗಳಿಗೂ ಒಳ್ಳೆಯದಾಗಲಿ ಎಂದು ಬಯಸುವುದೇ ಹಿರಿಯ ಸಂಸ್ಕೃತಿ.



ಸ್ವಾರ್ಥ ಚಿಂತನೆಯಲ್ಲೇ ಮುಳುಗಿರುವ ಭಾರತೀಯರಾದ ನಾವು ನಮ್ಮ ಪ್ರಾಚೀನ ಸಂಸ್ಕೃತಿಯನ್ನೆ ಮರೆತಿದ್ದೇವೆ. ಆ ಸಂಸ್ಕೃತಿ ನಮ್ಮಲ್ಲಿ ಮರುಹುಟ್ಟು ಪಡೆಯಬೇಕಾಗಿದೆ. ಪುನರುತ್ಥಾನವಾಗಬೇಕಾಗಿದೆ. ಬೇಕು ಎನ್ನುವ ಸಂಸ್ಕೃತಿ ಹೋಗಿ ಸಾಕು ಎಂಬ


HOTEL SHARADA




website: www.hotelsharada.com,
E-mail : hotelsharada@gmail.com

Ph: +91-080-2220 1042, + 91-080-2220 1044

1. Opposite: Bangalore City Railway Station
2. Opposite : Kempegowda Bus - Station (KBS)
3. Opposite : Majestic Metro Interchange Station

# 25/3, Kempegowda Circle,Bangalore - 560 009,
Near Upparpet Police Station